# ಸ್ವಹಿತಾಸಕ್ತಿಗಾಗಿ ಸ್ಥಳೀಯ ಸರ್ಕಾರಕ್ಕೆ ಕೊಡಲಿ ಪೆಟ್ಟು ಕೊಡುವ ಹುನ್ನಾರ?

ಕೊರೋನ ಎಂಬ ವಿಕೋಪ ಭಾರತಕ್ಕೆ ಅಪ್ಪಳಿಸಿ ತಿಂಗಳುಗಳೆ ಕಳೆಯಿತು. ಬಹು ವೇಗವಾಗಿ ಓಡುತ್ತಿದ್ದ ಜೀವನಕ್ಕೆ ಲಗಾಮು ಬಿದ್ದು ಬಹುತೇಕ ಚಟುವಟಿಕೆಗಳಿಗೆ ವಿರಾಮ ಬಿದ್ದಿದೆ. ಲಾಕ್‌ಡೌನ್ ಸಮಯದಲ್ಲಿ ಬಡವರ್ಗದ ಜನರ ಜೀವನ ಬಹಳ ಕ್ಲಿಷ್ಟಕರವಾಗಿ ಹೋಗಿದ್ದರಿಂದ ಘನ ರಾಜ್ಯ ಸರ್ಕಾರ ಕೆಲವು ಯೋಜನೆಗಳನ್ನು ಕೈಗೊಂಡಿತು. ಇದರಲ್ಲಿ ಉಚಿತ ರೇಷನ್ ವಿತರಿಸುವುದು, ಶಾಲೆಯ ಬಿಸಿಯೂಟದ ಸಾಮಗ್ರಿಯನ್ನೂ ಶಾಲೆವತಿಯಿಂದ ಮಕ್ಕಳಿಗೆ ವಿತರಿಸುವುದು, ಮಕ್ಕಳು ಮತ್ತು ಕಿಶೋರಿಯರಿಗೆ ಅಂಗನವಾಡಿ ಕಡೆಯಿಂದ ಊಟದ ಸಾಮಗ್ರಿ ವಿತರಣೆ ಮತ್ತು ಮುಂತಾದವು. ಯೋಜನೆಗಳನ್ನು ಘೋಷಿಸಿಬಿಟ್ಟರೆ ಸಾಕೆ? ಅದನ್ನು ತಳಮಟ್ಟಕ್ಕೆ ತಲುಪಿಸಬೇಕಲ್ಲ. ಇದರ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತದ್ದು ಸ್ಥಳೀಯ ಸರ್ಕಾರವಾದ ಗ್ರಾಮ ಪಂಚಾಯತ್. ಜನರಿಗೆ ಸಮಸ್ಯೆ ಬಂದಾಗ ತಕ್ಷಣಕ್ಕೆ ಸ್ಪಂದಿಸುವ ವ್ಯವಸ್ಥೆಯೆಂದರೆ ಅದು ಪಂಚಾಯತ್ ವ್ಯವಸ್ಥೆ. ತಮ್ಮ ವ್ಯಾಪ್ತಿಯಲ್ಲಿ ಪರಿಹಾರ ಸಾಧ್ಯವಾಗದಿದ್ದಾಗ ಇತರ ಸಮಾನಾಂತರ ಸರ್ಕಾರದೊಂದೊಂದಿಗೆ ಪರಿಹಾರಕ್ಕಾಗಿ ತಾಯಿ ಬೇರಿನಂತೆ ಕೆಲಸ ಮಾಡುತ್ತವೆ. ಕೇಂದ್ರ-ರಾಜ್ಯ ಸರ್ಕಾರಗಳು ಘೋಷಿಸಿದ ಯೋಜನೆಗಳು ತಳಮಟ್ಟದಲ್ಲಿ ಯಶಸ್ವಿಯಾಗಿ ತಲುಪುವಲ್ಲಿ ಪಂಚಾಯತ್ಗಳ ಪಾತ್ರ ದೊಡ್ಡದು. ಈಗಿರುವ ಸಂಕಷ್ಟದಲ್ಲಿ ವಿಕೇಂದ್ರಿಕರಣವನ್ನು ಗಟ್ಟಿಗೊಳಿಸುವುದೇ ಪರಿಹಾರ. ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ ಸುಮಾರು 23 ಜಿಲ್ಲೆಗಳ ಬಹುತೇಕ ಪಂಚಾಯತ್ಗಳಿಗೆ ದೂರವಾಣಿ ಸಂಪರ್ಕ ಮಾಡಿ, ಲಾಕ್‌ಡೌನ್ ಸಮಯದಲ್ಲಿ, ಎದುರಾಗಿರುವ ಪಿಡುಗಿನ ವಿರುದ್ಧ ಪಂಚಾಯತ್ ಹೇಗೆ ಹೋರಾಟ ಮಾಡುತ್ತಿದೆ? ಸೌಲಭ್ಯಗಳು ತಲುಪುತ್ತಿದೆವೆಯೆ? ಸವಾಲುಗಳು, ಸಮಸ್ಯೆಗಳು ಇದ್ದರೆ ಇತರೆ ಸರ್ಕಾರಗಳೊಟ್ಟಿಗೆ, ಅಧಿಕಾರಿಗಳೊಟ್ಟಿಗೆ ಸೇತುವೆಯಾಗಿ ಕೆಲಸ ಮಾಡುವ ಸೌಕರ್ಯಕಾರಿಕೆಯ ಕೆಲಸ ಮಾಡುತ್ತಿದೆ. ಪಂಚಾಯತ್ಗಳು ತನ್ನ ಎಲ್ಲಾ ಶಕ್ತಿ ಮೀರಿ ಕೆಲಸಗಳನ್ನು ಮಾಡುತ್ತಿವೆ. ಪ್ರತಿ ದಿನ ಬೆಳಗ್ಗೆ ಸಭೆ ಕರೆಯುವುದರಿಂದ ಹಿಡಿದು ಓಣಿ ಓಣಿ ಸುತ್ತಾಡಿ ಜನರಿಲ್ಲಿ ಜಾಗೃತಿ ಮೂಡಿಸುವ ಕೆಲಸದವರೆಗೂ ಪಂಚಾಯತ್ನ ಎಲ್ಲಾ ಸದಸ್ಯರು ಸ್ಥಳೀಯಾಡಳಿತದ ಪ್ರತಿನಿಧಿಗಳಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ನರೇಗ ಕೆಲಸವನ್ನು ಚಿಕ್ಕ ಗುಂಪುಗಳಲ್ಲಿ ಮಾಡಬಹುದೆಂದು ಆದೇಶ ಹೊರಡಿಸಿದ ಮೇಲೆ, ಅದರ ಪಾಲನೆ ಸರಿಯಾಗಿ ಆಗುವಂತೆ ನೋಡಿಕೊಳ್ಳುವ ಜವಾಬ್ದಾರಿಯೂ ಪಂಚಾಯತ್ನದ್ದೇ ಆಯಿತು. ರಾಜ್ಯದ ಹಲವೆಡೆ ನರೇಗ ಕೆಲಸಗಳು ಶುರುವಾಗಿ ಜನರಿಗೆ ಈಗ ಆರ್ಥಿಕ ಭದ್ರತೆ ಒದಗಿಸಿದೆ. ಅಲ್ಲದೆ ಬಿಹಾರ, ರಾಜಸ್ಥಾನದಿಂದೆಲ್ಲ ಬಂದಿದ್ದ ವಲಸೆ ಕಾರ್ಮಿಕರು ಲಾಕ್‌ಡೌನ್ ನಿಂದಾಗಿ ನಮ್ಮ ರಾಜ್ಯದಲ್ಲೇ ಉಳಿಯುವ ಪರಿಸ್ಥಿತಿ ಎದುರಾದಾಗ ಅವರಿಗೆ ಊಟ ವಸತಿ ಕೊಟ್ಟು ಸಲಹಿದ್ದು ಇದೇ ಸ್ಥಳೀಯ ಸರ್ಕಾರ. ಕೇಂದ್ರ

ಸರ್ಕಾರ ಮತ್ತು ರಾಜ್ಯ ಸರ್ಕಾರ ಎಷ್ಟೇ ಯೋಜನೆಗಳನ್ನು, ನೀತಿಗಳನ್ನು ರೂಪಿಸಿದರೂ ಅದು ಪ್ರಾಯೋಗಿಕ ಮಟ್ಟದಲ್ಲಿ ಯಶಸ್ವಿಯಾಗಲು ಸ್ಥಳೀಯ ಸರ್ಕಾರದ ಅಗತ್ಯ ಇದ್ದೇ ಇದೆ. ಅದರಲ್ಲೂ ನಾವು ಈಗಿರುವ ತುರ್ತು ಪರಿಸ್ಥಿತಿಯಲ್ಲಂತು ಜನಾದೇಶ ಪಡೆದ ಸದಸ್ಯರನ್ನೊಳಗೊಂಡ ಪಂಚಾಯತ್ ವ್ಯವಸ್ಥೆಯು ಅತ್ಯಗತ್ಯ. ಹೀಗಿರುವಾಗ ಕರ್ನಾಟಕ ರಾಜ್ಯ ಸರ್ಕಾರ ಒಂದು ಮಹತ್ವದ ತೀರ್ಮಾನ ಕೈಗೊಳ್ಳುವತ್ತ ಆಲೋಚಿಸುತ್ತಿದೆ. ಪಂಚಾಯತಿಗಳ ಅಧಿಕಾರಾವಧಿ ಮುಗಿಯುತ್ತಾ ಬಂದಿದೆ. ಮುಂದಿನ ಅವಧಿಗಾಗಿ ಚುನಾವಣೆ ಮಾಡಬೇಕಿದೆ. ಆದರೆ ಪಿಡುಗನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ, ಗ್ರಾಮ ಪಂಚಾಯತ್ ಚುನಾವಣೆ ನಡೆಸುವುದು ಅಸಾಧ್ಯವೆನ್ನುವುದು ರಾಜ್ಯ ಸರ್ಕಾರದ ನಿಲುವು. ಗ್ರಾಮದ ವ್ಯಾಪ್ತಿಯಲ್ಲಿ ರೇಷನ್, ಬೇರೆ ಅವಶ್ಯಕತೆ, ಕಾರ್ಖಾನೆಗಳ ಆರಂಭ ಇವೆಲ್ಲಾ ಸಾಧ್ಯವಿರುವಾಗ, ಚುನಾವಣೆ ಮಾತ್ರ ಯಾಕೆ ಸರ್ಕಾರಕ್ಕೆ ಅಸಾಧ್ಯ? ಚುನಾವಣೆಗಳನ್ನು ಸರಳ, ಚೊಕ್ಕ, ಕಡಿಮೆ ವೆಚ್ಚದಲ್ಲಿ ಮಾಡುವ ಬಗ್ಗೆ ಶ್ರೀ ರಮೇಶ್‌ಕುಮಾರ್ ನೇತೃತ್ವದ ಪಂಚಾಯತ್‌ರಾಜ್ ಕಾಯಿದೆ ತಿದ್ದುಪಡಿ ಸಮಿತಿ ಮಾಡಿದ ಶಿಫಾರಸ್ಸುಗಳನ್ನು ರಾಜ್ಯ ಸರ್ಕಾರ ಈಗ ಪರಿಗಣಿಸಬಹುದಲ್ಲವೆ? ಚುನಾವಣೆಯನ್ನು ಮುಂದೂಡಿ, ಈಗಿರುವ ಪಂಚಾಯಿತಿಗಳನ್ನು ರದ್ದು ಮಾಡಿ ಅದರ ಬದಲಿಗೆ ಆಡಳಿತಾಧಿಕಾರಿ ಅಥವ ಆಡಳಿತ ಸಮಿತಿಯೊಂದನ್ನು ನೇಮಿಸುವುದಾಗಿ ತೀರ್ಮಾನಿಸಲಾಗಿದೆ. ಆಡಳಿತಾಧಿಕಾರಿ ಅಥವಾ ಆಡಳಿತ ಸಮಿತಿ ನೇಮಕಕ್ಕೂ ಮೊದಲು ಚುನಾವಣೆ ನಡೆಸುವುದು ಯಾಕೆ ಅಸಾಧ್ಯ ಎಂಬುದನ್ನು ಸಕಾರಣ ನೀಡಿ ಸಾಬೀತು ಪಡಿಸದೆ ನಿರ್ಣಯ ತೆಗೆದುಕೊಳ್ಳುವುದು ಸರಿಯಲ್ಲ. ಅಲ್ಲದೆ, ಈ ನಿರ್ಧಾರ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನೇ ಬುಡಮೇಲು ಮಾಡುವ ಪ್ರಯತ್ನವಾಗಿದೆ. ಜನಾದೇಶ ಪಡೆದ ಜನಪ್ರತಿನಿಧಿಗಳನ್ನು ಕಡೆಗಣಿಸಿ ಜನಾದೇಶವಿರದ ಅಧಿಕಾರಿಗಳನ್ನು ಆ ಜಾಗದಲ್ಲಿ ಕೂರಿಸುವುದು ತರವಲ್ಲ. ಜನರ ಕಷ್ಟಗಳಿಗೆ ಸ್ಪಂದಿಸಲು ಜನರ ನಡುವೆಯೆ ಇರುವ, ಅವರೇ ಚುನಾಯಿಸಿರುವ ಪ್ರತಿನಿಧಿಗಳಿಗಿಂತ ಬೇರೊಬ್ಬರಿಗೆ ಸಾಧ್ಯವಿಲ್ಲ. ಇಲ್ಲಿವರೆಗು ರಾಜ್ಯ ಸರ್ಕಾರ ತನ್ನ ಯೋಜನೆಗಳು ಕಟ್ಟಕಡೆಯ ವ್ಯಕ್ತಿಗೂ ತಲುಪಿದೆ ಎಂದು ಬೀಗುತ್ತಿದೆಯೆಂದರೆ ಅದನ್ನು ಸಾಧ್ಯವಾಗಿಸಿದ್ದು ನಮ್ಮ ಗ್ರಾಮ ಪಂಚಾಯಿತಿಗಳು. ಈಗ ಅವರ ಅಧಿಕಾರ ಮುಗಿಯಿತೆನ್ನುವ ನೆಪದಲ್ಲಿ ಯಾವುದೋ ಚುನಾಯಿಸದ ಆಡಳಿತ ಸಮಿತಿ ನೇಮಿಸಿದರೆ, ಬೇಡದ ಅವ್ಯವಸ್ಥೆಗೆ ರಾಜ್ಯ ತಳಹದಿ ಹಾಕಿಕೊಟ್ಟಂತೆ. ಯಾರ ಏಳಿಗೆಗಾಗಿ ಇಂಥ ಕೇಂದ್ರಿಕೃತ ನೀತಿಯನ್ನು ತರಲು ರಾಜ್ಯ ಸರ್ಕಾರ ಹೊರಟಿದೆ ಎಂಬುದು ತಿಳಿತಿಲ್ಲ. ನಾವಿನ್ನೂ ಕೊರೋನ ಸಂಕಷ್ಟದಿಂದ ಹೊರ ಬಂದಿಲ್ಲ. ಹೀಗಿರುವಾಗ ಸಂಕಷ್ಟ ಪರಿಹಾರದತ್ತ ಮುನ್ನೆಡೆಯಲು ಟೊಂಕ ಕಟ್ಟಿ ನಿಂತು ಮಹತ್ತರ ಪಾತ್ರ ವಹಿಸಿದ ಪಂಚಾಯತ್ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಈ ನೀತಿಯಿಂದ ರಾಜ್ಯ ಸರ್ಕಾರ ಏನನ್ನು ಸಾಧಿಸಲು ಬಯಸುತ್ತಿದೆ? ಅವ್ಯವಹಾರಗಳಿಗೆ ನೇರ ದಾರಿ ಮಾಡಿಕೊಟ್ಟು

ಕೇಂದ್ರಿಕೃತ ಅಧಿಕಾರವನ್ನು ಅನುಭವಿಸುವ ದುರಾಲೋಚನೆ ಬಂದಿದೆಯೆ ನಮ್ಮ ರಾಜ್ಯ ಸರ್ಕಾರಕ್ಕೆ? ದಿನದಿಂದ ದಿನಕ್ಕೆ ಹದಗೆಡುತ್ತಲೆ ಇರುವ ಪರಿಸ್ಥಿತಿಯಲ್ಲಿ, ಪಂಚಾಯತ್ ಆಡಳಿತವನ್ನು ಅಧಿಕಾರಿಗಳ ಅಥವ ಆಡಳಿತ ಸಮಿತಿಯ ಕೈಗೆ ನೀಡಿ, ತಳದಿಂದ ಮತ್ತೆ ಎಲ್ಲವನ್ನು ಶುರು ಮಾಡಿ, ಆಗಿರುವ ಹುಣ್ಣನ್ನು ಕೆರೆಯುವ ಕೆಲಸದ ಅಗತ್ಯವಿದೆಯೆ? ಪ್ರಜಾಪ್ರಭುತ್ವದ ಮುಖ್ಯ ಸ್ತಂಭವಾಗಿರುವ ಚುನಾವಣೆಯನ್ನು ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ನಡೆಸಬೇಕು. ಒಂದು ವೇಳೆ ಅದು ಸಾಧ್ಯವೇ ಇಲ್ಲವೆಂದರೆ, ರಾಜ್ಯ ಸರ್ಕಾರಕ್ಕೆ ಬಲ ತುಂಬಿದ ಈಗಿರುವ ಚುನಾಯಿಸಿದ ಪಂಚಾಯತ್ ಸದಸ್ಯರನ್ನು ಚುನಾವಣೆಯಾಗುವವರೆಗು ಮುಂದುವರಿಸಿ ವಿಕೇಂದ್ರಕರಣದ ಆಶಯಕ್ಕೆ ಬದ್ಧತೆ ತೋರಬೇಕು. ಈ ತುರ್ತಿನ ಪರಿಸ್ಥಿತಿಯಲ್ಲಿ ಅದು ಅತ್ಯಗತ್ಯ ಮತ್ತು ತರ್ಕ ಬದ್ಧ ನ್ಯಾಯ ಕೂಡ. ಆಗಲೆ ನಾವು ಈ ಸಂಕಷ್ಟದಿಂದ ಪಾರಾಗಲು ಸಾಧ್ಯ. ಸರ್ಕಾರದ ಈ ದೂರಾಲೋಚನೆಯ ದುರಾಲೋಚನೆಗೆ ಪಂಚಾಯಿತಿಗಳ ವ್ಯಾಪಕ ವಿರೋಧ ವ್ಯಕ್ತವಾಗಿದ್ದು, ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನದ ಸೌಕರ್ಯಕಾರಿಕೆಯಲ್ಲಿ ಸುಮಾರು 21 ಜಿಲ್ಲೆಗಳಿಂದ ಪಂಚಾಯಿತಿಗಳು ಇದರ ವಿರುದ್ಧ ನಿರ್ಣಯ ಪತ್ರಗಳನ್ನು ಮುಖ್ಯಮಂತ್ರಿಗಳು ಮತ್ತು ಗ್ರಾಮೀಣಾಭಿವೃದ್ಧಿ ಸಚಿವರಿಗೆ ರವಾನೆ ಮಾಡುತ್ತಿದ್ದಾರೆ. ಘನ ರಾಜ್ಯ ಸರ್ಕಾರವು ಜನರ ಈ ಅಭಿಪ್ರಾಯವನ್ನು ಗೌರವಿಸಿ, ತಮ್ಮ ತೀರ್ಮಾನವನ್ನು ವಾಪಸ್ಸು ತೆಗೆದುಕೊಂಡು ಪ್ರಜಾಪ್ರಭುತ್ವದ ಆಶಯಗಳನ್ನು ಎತ್ತಿ ಹಿಡಿಯಬೇಕೆಂಬುದು ನಮ್ಮ ಹಕ್ಕೊತ್ತಾಯ.




ಕಿಶನ್ ರಾಮಮೂರ್ತಿ

ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್‌ಚಿಲ್ಡ್ರನ್
ಹಾಗೂ ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನದ ಕಾರ್ಯಕರ್ತರು

ದಿನಾಂಕ: 15–05–2020


Mobile No: 7411914641

Email: kishanram10198@gmail.com